


ತನಗೆಲ್ಲಿದೆ? ತಾನೂ ಇಂಥದ್ದೇ ಕೆಲಸ ಮಾಡಲಿಲ್ಲವೇ? ಪಾರ್ಕಿನಲ್ಲಿ ಕೂತು ಸಿಗರೇಟು ಸೇದಿದೆ. ಸೇದಿ ಉಳಿದ ತುಂಡನ್ನು ಬೂಟುಗಾಲಿನಿಂದ ಹೊಸಕಿ ಹಾಕಿದೆ. ಬನ್ ಕಟ್ಟಿಸಿಕೊಂಡು ತಂದ ಕಾಗದ ಗಾಳಿಗೆ ಹಾರಿ ಹೋದಾಗ ಅದನ್ನು ಅಲ್ಲಿಯೇ ಬಿಟ್ಟೆ. ತಂದು ಕಸದ ತೊಟ್ಟಿಗೆ ಹಾಕಲಿಲ್ಲ. ಅವನು ತಲೆ ತಗ್ಗಿಸಿ ಹೋಟೆಲಿನ ಬಳಿಗೆ ಹೋಗಿ ಮುಟ್ಟಿದ.

ದೋಸೆ ಹೋಟೆಲಿನ ಬಾಗಿಲು ಅರ್ಧ ಮುಚ್ಚಿತ್ತು. ಜನರೂ ಕಾಣಲಿಲ್ಲ. ಅವನು ಒಳಗೆ ಹೋದಾಗ ಹೋಟೆಲಿನ ಹುಡುಗರು ಶರಟು ತೆಗೆದು ಲುಂಗಿಯುಟ್ಟುಕೊಂಡು ಹರಟುತ್ತಾ ಕೂತಿದ್ದರು. ಅವನು ಹೋಗಿ 'ಏನು ಹೋಟೆಲಿಗೆ ರಜಾನಾ? ಇವತ್ತು ಶುಕ್ರವಾರ ಅಲ್ವಲ್ಲಾ?' ಎಂದು ಕೇಳಿದ.